**(ಇಂದು ದಿಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. ಎಸ್ ಕೆ ಡಿ ವಕೀಲರಿಂದಃ-**

ದಿನಾಂಕಃ 29-08-2022ರಂದು ಸೇಡಂನಲ್ಲಿ ಇ-ಸ್ಟಾಂಪ್ ಲಭ್ಯ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ಟಾಂಪ್ ನೀಡುವ ಕೇಂದ್ರಗಳು ಮುಚ್ಚಿದ್ದವು ಎಂದು ಹೇಳುತ್ತಾರೆ. ಸೇಡಂನಲ್ಲಿ 2 ಇ-ಸ್ಟಾಂಪ್ ಕೇಂದ್ರಗಳು ಇವೆ. ಸೇಡಂನಲ್ಲಿ 4-5 ಇ-ಸ್ಟಾಂಪ್ ಕೇಂದ್ರಗಳು ಇವೆ ಎಂದರೆ ಸರಿ. ಆನ್‌ಲೈನ್ ಚಾಪಾ ಕಾಗದವನ್ನು ರಾಘವೇಂದ್ರ ವಕೀಲರು ತಂದಿದ್ದಾರೆ. ಸದರಿ ಚಾಪಾ ಕಾಗದದ ಮೇಲೆ ಖರೀದಿ ಮಾಡಿದವರ ಹೆಸರು ಮತ್ತು ಯಾರ ಸಲುವಾಗಿ ಖರೀದಿ ಮಾಡಿದರು ಅವರ ಹೆಸರು ಬರೆದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಇ-ಖಾತಾ ಎಕ್ಸಟ್ರಾಕ್ಟ ಅನ್ನು ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ಅಗ್ರಿಮೆಂಟ್ ಆಗುವಾಗ ಇನ್ನೂ ಇ-ಖಾತೆ ಆಗಿರಲಿಲ್ಲ ಎಂದು ಹೇಳುತ್ತಾರೆ. ಅಗ್ರಿಮೆಂಟ್ ಆಗುವ ಶೌಕತ್‌ಅಲಿ ಹೆಸರಿನಲ್ಲಿ ಖಾತೆ ಇತ್ತು. ಸದರಿ ಖಾತಾ ಎಕ್ಸಟ್ರಾಕ್ಟನಲ್ಲಿ ದಾವಾ ಆಸ್ತಿಯ ವಿಸ್ತೀರ್ಣ 40 x 60 ಅಡಿಗಳು ಇತ್ತು. ಸಾಕ್ಷಿಗೆ ಒಂದು ಖಾತಾ ಎಕ್ಸಟ್ರಾಕ್ಟನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಹಾಜರು ಪಡಿಸಿಲ್ಲ ಎಂದು ಹೇಳಿರುತ್ತಾರೆ. ಸದರಿ ದಾಖಲಾತಿಯಲ್ಲಿ ವಿಸ್ತೀರ್ಣ ಎಷ್ಟು ತೋರಿಸಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಎಕ್ಸಟ್ರಾಕ್ಟನಲ್ಲಿ ವಿಸ್ತೀರ್ಣ 40 x 60 ಅಡಿಗಳು ಎಂದು ಬರೆದಿಲ್ಲ ಎಂದರೆ ಸರಿ. ಸದರಿ ಎಕ್ಸಟ್ರಾಕ್ಟನ್ನು ನಿಸಿ-1 ಎಂದು ಗುರುತಿಸಲಾಯಿತು.

ಅಗ್ರಿಮೆಂಟ್‌ನಲ್ಲಿ 3 ತಿಂಗಳ ಒಳಗಾಗಿ ಖರೀದಿ ಪತ್ರ ಮಾಡಿಕೊಳ್ಳ ಬೇಕು ಎಂದು ನಮೂದಾಗಿದೆ. ಸದರಿ 3 ತಿಂಗಳ ನಂತರ ನಾನು ಪ್ರತಿವಾದಿಯರಿಗೆ ನೋಟಿಸು ಕೊಟ್ಟಿಲ್ಲ. ಎಲ್ಲಾ ಪ್ರತಿವಾದಿಯರು ಅಗ್ರಿಮೆಂಟ್‌ಗೆ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗುವಾಗ 1ನೇ ಪ್ರತಿವಾದಿ ಒಬ್ಬರೇ ಅಗ್ರಿಮೆಂಟ್‌ಗೆ ಸಹಿ ಮಾಡಿದ್ದು ಉಳಿದವರ ಸಹಿಗಳನ್ನು ಮಾರನೇ ದಿನ ಮಾಡಿಸುತ್ತೇನೆ ಎಂದು ಹೇಳಿದ್ದರು. ಆದರೆ, ಮಾರನೇ ದಿನ ಉಳಿದವರನ್ನು ಕರೆತಂದು ಸಹಿ ಮಾಡಿಸಿಲ್ಲ ಎಂದು ಹೇಳುತ್ತಾರೆ. ನಾನು ಸಹಿ ಮಾಡಲು ಏಕೆ ಬರಲಿಲ್ಲ ಎಂದು ಪ್ರತಿವಾದಿಯರಿಗೆ ನೋಟಿಸ ಕೊಟ್ಟಿಲ್ಲ. ಅಗ್ರಿಮೆಂಟ್‌ನಲ್ಲಿನ ಆಸ್ತಿಯ ವರ್ಣನೆ ಮತ್ತು ವಾದ ಪತ್ರದಲ್ಲಿನ ದಾವಾ ಸ್ವತ್ತಿನ ವರ್ಣನೆ ಬೇರೆ ಇದೆ ಎಂದರೆ ಸರಿಯಲ್ಲ.

ಸಾಕ್ಷಿಗಳಾದ ಮೊಹಮ್ಮದ್ ಫಾರುಕ್ ಮತ್ತು ಅಯುಬಖಾನ್ ರವರು ಪ್ರತಿವಾದಿಯರು ಜಮೀನು ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಹೇಳಿದ್ದು ಅದರಂತೆ ನಾವು ಹೋಗಿ ಪ್ರತಿವಾದಿಯರ ಜೊತೆ ವ್ಯವಹಾರದ ಮಾತುಕತೆ ಮಾಡಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ದಾರರ ಸಮಕ್ಷಮ 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 1ನೇ ಪ್ರತಿವಾದಿ ದಾವಾ ಆಸ್ತಿಯನ್ನು 1 ಕೋಟಿ 55 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಟಿ.ಎಮ್.ಸಿ. ಖಾತಾ ಎಕ್ಸಟ್ರಾಕ್ಟನಲ್ಲಿನ ದಾವಾ ಆಸ್ತಿಯ ಅಳತೆ, ಅಗ್ರಿಮೆಂಟ್‌ನಲ್ಲಿನ ಆಸ್ತಿಯ ಅಳತೆ ಮತ್ತು ವಾದ ಪತ್ರದಲ್ಲಿನ ಆಸ್ತಿಯ ಅಳತೆ ಒಂದಕ್ಕೊಂದು ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ, 1ನೇ ಪ್ರತಿವಾದಿ ತಾಯಿ ಅಮಿನಾಬೇಗಂರವರ ಜೊತೆ ಮೊಬೈಲ್ ಮೂಲಕ ಮಾತನಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆಗ ಅಮಿನಾಬೇಗಂರವರು ದಾವಾ ಆಸ್ತಿ ಮಾರಾಟ ಮಾಡಲು ಎಲ್ಲಾ ಪ್ರತಿವಾದಿಯರು ಒಪ್ಪಿ ಕೊಂಡಿದ್ದಾರೆ ಎಂದು ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

1ನೇ ಪ್ರತಿವಾದಿ ನನ್ನ ಬಳಿ 5 ಲಕ್ಷ ರೂಪಾಯಿ ಕೈ ಸಾಲ ಕೇಳಿದ್ದರು ಆಗ ನಾನು ಸದರಿ ಸಾಲಕ್ಕೆ ಭದ್ರತೆಗೆಂದು ಹೇಳಿ ಖಾಲಿ ಕಾಗದಗಳ ಮೇಲೆ ಸಹಿ ಪಡೆದುಕೊಂಡು ಅಗ್ರಿಮೆಂಟನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ, ರಾಘವೇಂದ್ರರಾವ್ ವಕೀಲರು 1ನೇ ಪ್ರತಿವಾದಿ ಮಾಹಿತಿ ನೀಡಿದಂತೆ ಅಗ್ರಿಮೆಂಟ್‌ನ್ನು ತಯಾರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಪ್ರತಿವಾದಿಯರು ಆಗಸ್ಟ-2022ರಲ್ಲಿ ಸೇಡಂನಲ್ಲಿ ಇರಲಿಲ್ಲ ಎಂದರೆ 1ನೇ ಪ್ರತಿವಾದಿ ಸೇಡಂನಲ್ಲಿ ವಾಸವಾಗಿದ್ದರು, ಉಳಿದ ಪ್ರತಿವಾದಿಯರು ಹೈದ್ರಾಬಾದ್‌ನಲ್ಲಿ ವಾಸವಾಗಿದ್ದರು. ಆಟಸ್ಟ -2022ರಿಂದ ಡಿಸೆಂಬರ್-2022ರವರೆಗೆ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ, ಬ್ಯಾಂಕ್ ಪಾಸಬುಕ್ ನೋಡಿ ಹೇಳಬೇಕು ಎನ್ನುತ್ತಾರೆ. ನನ್ನ ಬ್ಯಾಂಕ್ ಪಾಸಬುಕ್ ಅನ್ನು ಹಾಜರು ಪಡಿಸಲು ತೊಂದರೆ ಇಲ್ಲ, ಈಗ ನನ್ನ ಬ್ಯಾಂಕ್ ಖಾತೆಯಲ್ಲಿ ಸುಮಾರು 70-80 ಲಕ್ಷ ಹಣ ಇವೆ. ವ್ಯವಹಾದಲ್ಲಿ ಹಣ ಕೊಡುವುದು ಮತ್ತು ಪಡೆದುಕೊಳ್ಳುವುದು ಎರಡು ಇರುತ್ತದೆ ಎಂದರೆ ಸರಿ. ನಾನು ಪ್ರತಿವಾದಿಯರಿಗೆ ಸದಾ

ಕಾಲ ಹಣ ನೀಡಿ ಕ್ರಯ ಪತ್ರ ಬರೆಯಿಸಿಕೊಳ್ಳಲು ಸಿದ್ಧನಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿಃ09-09-2022ರಂದು ಪ್ರತಿವಾದಿಯರಿಗೆ ಫೋನ ಮಾಡಿ ನನ್ನ ಬಳಿ ಹಣ ಇದೆ, ಬಂದು ಹಣ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡಿ ಎಂದು ಹೇಳಿದ್ದೆ, ಆ ಬಗ್ಗೆ ಫೋನ್ ರೆಕಾರ್ಡಿಂಗ್ ಮಾಡಿಲ್ಲ, ಯಾವ ನಂಬರಕ್ಕೆ ಫೋನ್ ಮಾಡಿದ್ದೀರಿ ಎಂದರೆ ಸದರಿ ನಂಬರ ನನ್ನ ಇನ್ನೊಂದು ಮೊಬೈಲ್‌ನಲ್ಲಿ ಮನೆಯಲ್ಲಿದೆ ಎಂದು ಹೇಳುತ್ತಾರೆ. ನಾನು ಯಾವತ್ತು ಪ್ರತಿವಾದಿಯರಿಗೆ ಫೋನ್ ಮಾಡಿ ಹಣ ತೆಗೆದುಕೊಂಡು ಕ್ರಯ ಪತ್ರ ಬರೆದುಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಖರೀದಿ ವ್ಯವಹಾರದ ಬಗ್ಗೆ ಪ್ರತಿವಾದಿಯರ ಜೊತೆ ಯಾವುತ್ತು ಯಾವುದೇ ಮಾತುಕತೆ ಆಗಿಲ್ಲ ಮತ್ತು ಪ್ರತಿವಾದಿಯರು ನನ್ನ ಪರವಾಗಿ ನಿಪಿ-1 ಮತ್ತು 2ಅನ್ನು ಬರೆದಕೊಟ್ಟಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನಿಂದ ಪಡೆದುಕೊಂಡಿದ್ದ 5 ಲಕ್ಷ ರೂಪಾಯಿ ಸಾಲದ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ನಾನು ಈ ದಾವೆ ಸಲ್ಲಿಸಿದ ಮೇಲೆ 1ನೇ ಪ್ರತಿವಾದಿ ನನ್ನ ಖಾತೆಗೆ 5 ಲಕ್ಷ ಹಣ ಜಮಾ ಮಾಡಿದ್ದಾರೆ. ಸಾಕ್ಷಿ ಮುಂದುವರೆದು ನಾನು 1ನೇ ಪ್ರತಿವಾದಿಗೆ ನನ್ನ ಬ್ಯಾಂಕ್ ಖಾತೆ ನಂಬರ ಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. ಈ ದಾವೆ ಸಲ್ಲಿಸುವ ಮುಂಚೆ 1ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆಗೆ 1 ಲಕ್ಷ ರೂಪಾಯಿ ಜಮಾ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆ ಬಗ್ಗೆ 1ನೇ ಪ್ರತಿವಾದಿಗೆ ಫೋನ್ ಮೂಲಕ ಮೇಸೆಜ್ ಮಾಡಿ ನಾನು ಈಗಾಗಲೇ ದಾವೆ ಸಲ್ಲಿಸಲು ಕೊರ್ಟ-ಫಿ ಕಟ್ಟಿದ್ದು ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳೋಣ ಎಂದು ಹೇಳಿದ್ದೆ ಎಂದು ಹೇಳುತ್ತಾರೆ.

ಬ್ಯಾಂಕ್ ಸಿಬ್ಬಂದಿಗೆ ಲಂಚ ಕೊಟ್ಟು ನನ್ನ ಬ್ಯಾಂಕ್‌ಖಾತೆಗೆ 1 ಲಕ್ಷ ರೂಪಾಯಿ ಹಣ ಹಾಕಿದ್ದಾರೆ ಎಂದು ನಾನು 1ನೇ ಪ್ರತಿವಾದಿಗೆ ನನ್ನ ಬ್ಯಾಂಕ್ ಖಾತೆ ನಂಬರ ಕೊಡದೆ ಇದ್ದರೂ ಆತ ಹಣ ಹಾಕಿದ ಕಾರಣ ಆರೋಪ ಮಾಡಿದ್ದೇನೆ. ನನ್ನ ಬಳಿ ಹಣ ಇತ್ತು ಅದನ್ನು ನಗದು ರೂಪದಲ್ಲಿ 1ನೇ ಪ್ರತಿವಾದಿಗೆ ಕೊಟ್ಟಿದ್ದೇನೆ. ದಿನಾಂಕಃ15-03-2023ರಂದು 1ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆ 1ಲಕ್ಷ ರೂಪಾಯಿ ಜಮಾ ಮಾಡಿದ್ದರು ಎಂದರೆ ಸರಿ. ದಿನಾಂಕಃ 18-03-2023ರಂದು 1ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆಗೆ 4ಲಕ್ಷ ರೂಪಾಯಿ ಜಮಾ

ಮಾಡಿದ್ದರು ಎಂದರೆ ನೋಡಬೇಕು ಎಂದು ಹೇಳುತ್ತಾರೆ. ನಾನು ದಿನಾಂಕಃ19-03-2023ರಂದು ಕೋರ್ಟ್ ಫಿ ಪಾವತಿ ಮಾಡಿದ್ದೇನೆ ಎಂದರೆ ಇರಬಹುದು.

ದಿನಾಂಕಃ29-08-2022ರಂದು ನನ್ನ ಬಳಿ ಹಣ ಇರಲಿಲ್ಲ, ಕಾರಣ ನಾನು 1ನೇ ಪ್ರತಿವಾದಿ ಜೊತೆ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರು ದಾವ ಸ್ವತ್ತನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡಲು ದಿನಾಂಕಃ29-08-2022ಕ್ಕಿಂತ ಮುಂಚೆ ಒಪ್ಪಿ ಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರು ಶೇರಿಕಾಗಿ ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಸಲುವಾಗಿ ನಿಪಿ-1 ಮತ್ತು 2ಅನ್ನು ಸುಳ್ಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ನೊಂದಾಯಿತ ಖರೀದಿ ಪತ್ರ ಬರೆದುಕೊಡಲು 1 ರಿಂದ 4ನೇ ಪ್ರತಿವಾದಿಯರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಶೌಕತ್‌ಅಲಿ ತೀರಿಹೋದ ನಂತರ ಪ್ರತಿವಾದಿಯರಿಗೆ ಅವರವರ ಪಾಲು ಬೇರೆ ಬೇರೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾರಣ ಪ್ರತಿವಾದಿಯರು ಖರೀದಿ ಪತ್ರ ಬರೆದುಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಬ್ಯಾಂಕ್ ಖಾತೆಗೆ 1 ಬಾರಿ 4ಲಕ್ಷ ಇನ್ನೊಂದು ಸಲ 1 ಲಕ್ಷ ಹಣ ಜಮಾ ಮಾಡಿದ ನಂತರ ನಾನು ಸದರಿ ಹಣವನ್ನು 1ನೇ ಪ್ರತಿವಾದಿಗೆ ಈ ವರೆಗೆ ವಾಪಸ್ಸು ಕೊಟ್ಟಿಲ್ಲ. ಆ ಕಾರಣಕ್ಕಾಗಿ ಕ್ರಯದ ಒಟ್ಟು ಮೊತ್ತದಲ್ಲಿ 1 ರೂಪಾಯಿ ಕೂಡಾ ಪ್ರತಿವಾದಿಯರಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಯರು ದಾವಾ ಆಸ್ತಿಯನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡಲು ಮೊದಲೇ ಒಪ್ಪಿಕೊಂಡಿದ್ದ ಕಾರಣ 5ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರ ಬರೆದುಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(5ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**